ಜಾನ್ ಲೋಗಿ ಬಾಯರ್ಡ (1888-1946)
ಮತ್ತು
ಟೆಲಿವ್ಹಿಜನ್ ದ ಇತರ ಸಂಶೋಧಕರು

ಜಾನ್ ಲೋಗಿ ಬಾಯರ್ಡನಿಗೆ ಹೊಸ ಹೊಸ ಶೋಧನೆಗಳಲ್ಲಿ ರುಚಿ ಇತ್ತು. ಚಿಕ್ಕವನಿದ್ದಾಗಲೇ ತನ್ನ ಹಾಗು ತನ್ನ ಗೆಳೆಯನ ಮನೆಯನ್ನು ಒಂದು ತಾನೇ ಮಾಡಿದ ಟೆಲಿಫೋನ ಎಕ್ಸಚೇಂಜಿಗೆ ಜೋಡಿಸಿ ಸಂವಾದಿಸುತ್ತಿದ್ದನು. (ಆತನ ಟೆಲಿಫೋನಿನ ತಂತಿಗಳೆಲ್ಲ ದಾರಿಯಲ್ಲಿ ಜೋತಾಡುತ್ತಿದ್ದವು.) ಆ ಮೇಲೆ ಆತನ ಲಕ್ಷವೆಲ್ಲ ಟೆಲಿವ್ಹಿಜನ್ನಿನ ಕಡೆ ಹೋಯಿತು.

ಜಾನ್ ನ ಮನಸ್ಸಿನಲ್ಲಿ ಮೊಟ್ಟ ಮೊದಲನೆ ಸರಿಯಾಗಿ ನಡೆಯುವ ಟೆಲಿವ್ಹಿಜನ್ ಮಾಡಲೇಬೇಕೆಂಬ ಬಯಕೆ ಇತ್ತು. ಆದರೆ ಆತನು ಅನುಸರಿಸಿದ ರೀತಿ ಈಗಿನ ಕಾಲದ ಇಲೆಕ್ಟ್ರಾನಿಕ್ ಟೆನಿವ್ಹಿಜನ್ನಿಗಿಂತ ಬೇರೆಯಾಗಿತ್ತು. ಆತನ ರಚನೆಯಲ್ಲಿ ಚಿಕ್ಕ ಚಿಕ್ಕ ಚಿತ್ರಗಳಿರುವ ಗಾಜಿನ ಪಟ್ಟಿಗಳು ತಿರುಗುವ ಹಾಗೆ ಮಾಡಲ್ಪಟ್ಟಿತ್ತು. ಆತನ ಹತ್ತಿರ ಬಂಡವಾಳವಿರಲಿಲ್ಲ. ಹಾಗು ಮನೆಯಲ್ಲಿಯ ಚಿಕ್ಕ-ಪುಟ್ಟ ಸಾಮಗ್ರಿಗಳಿಂದ ರಚನೆ ಮಾಡಬೇಕಾಗುತ್ತಿತ್ತು.



ಎಷ್ಟೋ ಸಲ ಪಟ್ಟಿಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ. ಗಾಜಿನ ಚೂರುಗಳು ಚೆಲ್ಲಾ-ಪಿಲ್ಲಿಯಾಗಿ ಕೋಣೆ ತುಂಬ ಹರಡುತ್ತಿದ್ದವು. ಆದರೂ ಜಾನ್ ನು ತನ್ನ ಕೆಲಸ ಮುಂದುವರೆಸುತ್ತಿದ್ದನು.



1925 ರಲ್ಲಿ ಲಂಡನ್ನಿನ ಒಂದು ಡಿಪಾರ್ಟಮೆಂಟಲ್ ಸ್ಟೋರ್ ದಲ್ಲಿ ಜಾನ್ ನು ಜಗತ್ತಿನಲ್ಲಿಯ ಮೊಟ್ಟ ಮೊದಲನೆಯ TV ಬಿತ್ತರಣೆ ಪ್ರಯೋಗವನ್ನು ಮಾಡಿ ತೋರಿಸಿದನು.

ಇದಾದ ಒಂದು ವರುಷದ ನಂತರ ವೈಜ್ಞಾನಿಕರ ಒಂದು ಗುಂಪು ಜಾನ್ ನ ಅಡಿಗೆ ಮನೆಯಲ್ಲಿ ಆತನ TV ಡೆಮಾನಸ್ಟ್ರೆಶನ್ ನೋಡಲು ಸೇರಿದರು. ವೈಜ್ಞಾನಿಕರೆಲ್ಲರಿಗೂ ಈ ಪ್ರಯೋಗ ಸಾಕಷ್ಟು ಹಿಡಿಸಿತು. ಇದಾದ ಕೂಡಲೆ ಜಾನ್ ನಿಗೆ BBC ಯ ಮೇಲೆ TV ಕಾರ್ಯಕ್ರಮಗಳನ್ನು ತೋರಿಸಲು ಅನುಮತಿ ಕೊಡಲಾಯಿತು.



ಆದರೆ ಜಾನ್ ನ ಮೆಕ್ಯಾನಿಕಲ್ ಭಾಗವು ಅಷ್ಟೊಂದು ಸರಿ ಇರಲಿಲ್ಲ. ಆ ಕಾಲದಲ್ಲಿ ಇನ್ನು ಎಷ್ಟೋ ಸಂಶೋಧಕರು ಇಲೆಕ್ಟ್ರಾನಿಕ್ TVಯನ್ನು ಶೋಧಿಸುತ್ತಿದ್ದರು. ಅವು ಚೆನ್ನಾಗಿ ಕೆಲಸ ಮಾಡುತ್ತಿದ್ದವು. ಉಟಾಹದಲ್ಲಿಯ ಒಕ್ಕಲಿಗನ ಮಗ, ಫಿಲೋ. ಟಿ. ಫಾನ್ಸವರ್ಥ ಎಂಬ 14 ವರುಷದವನು 1922ರಲ್ಲಿ ಮೊದಲು ಸಲ ಇಲೆಕ್ಟ್ರಾನಿಕ್ TVಯ ಕಲ್ಪನೆಯನ್ನು ಮುಂದಿಟ್ಟನು.

1926ರಲ್ಲಿ ಜಪಾನಿನ ಕೆಂಜಿರೊ ತಕಯಾನಗಿ ಮೊದಲನೆ ಇಲೆಕ್ಟ್ರಾನಿಕ್ TVಯನ್ನು ತಯಾರಿಸಿ ಚಲಚಿತ್ರಗಳನ್ನು ತೋರಿಸಿದನು. ಅಮೇರಿಕೆಯಲ್ಲಿ ರಶಿಯಾದಿಂದ ಒಲಸೆಗೊಂಡ ಬ್ಲಾದಿಮಿರ್ ಝ್ವಾಯಕಿನ್ ಪ್ರತಿಮೆಗಳ ರೆಕಾರ್ಡ ಮಾಡಿ ಅವುಗಳನ್ನು ಬಿತ್ತರಿಸುವ ಉಪಕರಣವನ್ನು ತಯಾರಿಸಿದನು. ಅದೇ ನಿಜವಾದ TV ಗೆ ಜನ್ಮ ಕೊಟ್ಟಿತು. 1950ರ ನಂತರ ಮನೆ-ಮನೆಗಳಲ್ಲಿ ಇಲೆಕ್ಟ್ರಾನಿಕ್ TV ಗಳ ಆಗಮನ ವಾಗತೊಡಗಿತು. ಇದರ ಎಲ್ಲ ಶ್ರೇಯವು ಈ ಸಂಶೋಧಕರಿಗೆ ಹೋಗುವದು.